# ಶಿಕ್ಷಣ ಸಂಸ್ಥೆಗಳ ನೋಂದಣಿ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಂಸ್ಥೆಯ ಸಾರಿಗೆಗಳು ಕಾರ್ಯಾಚರಣೆಯಾಗುವ ವ್ಯಾಪ್ತಿಯವರೆಗೂ ವಿದ್ಯಾರ್ಥಿ ಪಾಸುಗಳನ್ನು ರಿಯಾಯಿತಿ/ಉಚಿತವಾಗಿ ವಿತರಣೆ ಮಾಡುತ್ತಿದೆ. ಸಂಸ್ಥೆಯ ವಿದ್ಯಾರ್ಥಿ ಪಾಸುಗಳನ್ನು ಪಡೆಯಲಿಚ್ಚಿಸುವ ವಿದ್ಯಾರ್ಥಿಗಳ ಶಿಕ್ಷಣ ಸಂಸ್ಥೆಗಳು ಸಂಸ್ಥೆಯಲ್ಲಿ ನೋಂದಣಿಯಾಗುವುದು ಕಡ್ಡಾಯವಾಗಿರುತ್ತದೆ.

**ಶಿಕ್ಷಣ ಸಂಸ್ಥೆಗಳು ಹೊಸದಾಗಿ ನೋಂದಣಿಯಾಗುವ ಕ್ರಮಗಳು:**

- ಸಿ.ಬಿ.ಎಸ್.ಇ/ಐ.ಸಿ.ಎಸ್.ಇ, ಐ.ಟಿ.ಐ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ, ತಾಂತ್ರಿಕ, ವೈದ್ಯಕೀಯ ಮತ್ತು ಸಂಜೆ ಕಾಲೇಜು ನಡೆಸುವ ಶಿಕ್ಷಣ ಸಂಸ್ಥೆಗಳು ಸಂಸ್ಥೆಯಲ್ಲಿ ನೋಂದಣಿಯಾಗುವುದು ಕಡ್ಡಾಯವಾಗಿರುತ್ತದೆ. ಸರ್ಕಾರದಿಂದ ಮಾನ್ಯತೆ ಪಡೆದು, SATS ನಲ್ಲಿ ಎನ್‌ರೋಲ್ ಆಗಿರುವ ರಾಜ್ಯ ಪಠ್ಯಕ್ರಮ ಹೊಂದಿದ 10 ನೇ ತರಗತಿವರೆಗಿನ ಶಿಕ್ಷಣ ಸಂಸ್ಥೆಗಳು ನೋಂದಣಿಯಾಗುವ ಅವಶ್ಯಕತೆ ಇರುವುದಿಲ್ಲ.
- ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಅರ್ಜಿಯಲ್ಲಿ ಈ ಕೆಳಕಂಡಂತೆ ಭರ್ತಿ ಮಾಡುವುದು.
    - ಕೋರ್ಸ್‌ಗಳ ವರ್ಗ(Institution type) ವನ್ನು ಆಯ್ಕೆ ಮಾಡಿಕೊಳ್ಳುವುದು – ಅಂದರೆ ಸಿ.ಬಿ.ಎಸ್.ಇ/ಐ.ಸಿ.ಎಸ್.ಇ, ಐ.ಟಿ.ಐ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ, ತಾಂತ್ರಿಕ, ವೈದ್ಯಕೀಯ ಮತ್ತು ಸಂಜೆ ಕಾಲೇಜು. ಕೋರ್ಸ್‌ಗಳ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳ ವಿಧಗಳನ್ನು ಸಿದ್ದಪಡಿಸಲಾಗಿದೆ.
    - ಶಿಕ್ಷಣ ಸಂಸ್ಥೆಗಳು ಒಂದಕ್ಕಿಂತ ಹೆಚ್ಚಿನ ವರ್ಗದ ಕೋರ್ಸ್‌ಗಳನ್ನು(Institution type) ನಡೆಸುತ್ತಿದ್ದಲ್ಲಿ ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವುದು.
    - ಶಿಕ್ಷಣ ಸಂಸ್ಥೆಗಳ ನೋಂದಣಿಯ ಆನ್‌ಲೈನ್ ಅರ್ಜಿಯಲ್ಲಿ ಬೆಂಗಳೂರಿನ ಶಾಲಾ/ಕಾಲೇಜುಗಳ ಪಟ್ಟಿಯಿದ್ದು (Dropdown), ಪಟ್ಟಿಯಲ್ಲಿ ತಮ್ಮ ಕಾಲೇಜನ್ನು ಆಯ್ಕೆ ಮಾಡಿಕೊಳ್ಳುವುದು. ಒಂದು ವೇಳೆ ತಮ್ಮ ಶಿಕ್ಷಣ ಸಂಸ್ಥೆಯ ಹೆಸರು ಇಲ್ಲವಾದಲ್ಲಿ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು/ಪ್ರಾಂಶುಪಾಲರು dtostudentpass@mybmtc.com ಇ–ಮೇಲ್ ವಿಳಾಸಕ್ಕೆ ಸದರಿ ಶಿಕ್ಷಣ ಸಂಸ್ಥೆಯನ್ನು ಪಟ್ಟಿಯಲ್ಲಿ ಸೇರಿಸಲು ಅವಶ್ಯ ದಾಖಲೆಗಳೊಂದಿಗೆ ಕೋರಿಕೆ ಸಲ್ಲಿಸುವುದು.
    - ಶಿಕ್ಷಣ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡ ಕೂಡಲೇ ಶಿಕ್ಷಣ ಇಲಾಖೆಯಿಂದ ನೀಡಲಾಗುವ ಕಾಲೇಜು ಕೋಡ್ ಸಂಖ್ಯೆಯು ಸ್ವಯಂಚಾಲಿತವಾಗಿ ಪ್ರದರ್ಶನವಾಗುವುದು.
    - ನಂತರ ಶಿಕ್ಷಣ ಸಂಸ್ಥೆಯ ವಿಳಾಸ, ಪಿನ್‌ಕೋಡ್, ಶಿಕ್ಷಣ ಸಂಸ್ಥೆಯ ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸವನ್ನು ಅಪ್‌ಡೇಟ್ ಮಾಡುವುದು.
    - ವಿಶ್ವವಿದ್ಯಾನಿಲಯ (ಶಿಕ್ಷಣ ಸಂಸ್ಥೆಗೆ ಮಾನ್ಯತೆ ನೀಡಿರುವ) ವನ್ನು Dropdown ನಲ್ಲಿ ಆಯ್ಕೆ ಮಾಡಿಕೊಳ್ಳುವುದು. . ಒಂದು ವೇಳೆ ವಿಶ್ವವಿದ್ಯಾನಿಲಯದ ಹೆಸರು ಇಲ್ಲವಾದಲ್ಲಿ ಪ್ರಾಂಶುಪಾಲರು dtostudentpass@mybmtc.com ಇ–ಮೇಲ್ ವಿಳಾಸಕ್ಕೆ ಸದರಿ ವಿಶ್ವವಿದ್ಯಾನಿಲಯವನ್ನು ಪಟ್ಟಿಯಲ್ಲಿ ಸೇರಿಸಲು ಅವಶ್ಯ ದಾಖಲೆಗಳೊಂದಿಗೆ ಕೋರಿಕೆ ಸಲ್ಲಿಸುವುದು.
    - ಕೋರ್ಸ್‌ಗಳನ್ನು Dropdown ನಲ್ಲಿ ಆಯ್ಕೆ ಮಾಡಿಕೊಳ್ಳುವುದು. ಒಂದು ವೇಳೆ ಯಾವುದಾದರು ಕೋರ್ಸ್‌ನ ಹೆಸರು Dropdown ನಲ್ಲಿ ಇಲ್ಲವಾದಲ್ಲಿ ಪ್ರಾಂಶುಪಾಲರು dtostudentpass@mybmtc.com ಇ–ಮೇಲ್ ವಿಳಾಸಕ್ಕೆ ಸದರಿ ಕೋರ್ಸ್‌ನ್ನು ಪಟ್ಟಿಯಲ್ಲಿ ಸೇರಿಸಲು ಅವಶ್ಯ ದಾಖಲೆಗಳೊಂದಿಗೆ ಕೋರಿಕೆ ಸಲ್ಲಿಸುವುದು.

- ವಿದ್ಯಾರ್ಥಿಗಳು ಪಾಸಿಗಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸಲು (ವಿದ್ಯಾರ್ಥಿಗಳು ಸಲ್ಲಿಸುವ ಅರ್ಜಿಗಳ ವಿವರಗಳು ಸಂಬಂಧಿಸಿದ ಕಾಲೇಜಿನ ಬಳಕೆದಾರರ ಖಾತೆಯಲ್ಲಿ ಲಭ್ಯವಿರುತ್ತವೆ) ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು/ಪ್ರಾಂಶುಪಾಲರು ಓರ್ವ ನೋಡಲ್ ಅಧಿಕಾರಿಯನ್ನು ನಾಮನಿರ್ದೇಶನ ಮಾಡುವುದು. ನಾಮನಿರ್ದೇಶನದಲ್ಲಿ ನೋಡಲ್ ಅಧಿಕಾರಿಯ ಹೆಸರು, ಹುದ್ದೆ, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸವನ್ನು ಸಲ್ಲಿಸುವುದು.
- ನೋಡಲ್ ಅಧಿಕಾರಿಯ ನೇಮಕಾತಿ ಪತ್ರ ಹಾಗೂ ಶಿಕ್ಷಣ ಸಂಸ್ಥೆಯ ಮಾನ್ಯತೆ ಪತ್ರವನ್ನು ಅರ್ಜಿಯಲ್ಲಿ ಅಪ್‌ಲೋಡ್ ಮಾಡುವುದು. ನೋಡಲ್ ಅಧಿಕಾರಿಯ ನಾಮನಿರ್ದೇಶನದ ಅರ್ಜಿಯು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
- ನಂತರ ನೋಡಲ್ ಅಧಿಕಾರಿಯ ದೂರವಾಣಿ ಸಂಖ್ಯೆಗೆ OTP ಯನ್ನು ರವಾನಿಸಲಾಗುವುದು. ಶಿಕ್ಷಣ ಸಂಸ್ಥೆಯ ನೋಂದಣಿ ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಸ್ವೀಕೃತಿ ಸಂಖ್ಯೆಯನ್ನು ನೋಡಲ್ ಅಧಿಕಾರಿಯ ದೂರವಾಣಿ ಸಂಖ್ಯೆಗೆ ರವಾನಿಸಲಾಗುವುದು.
- ಬೆಂ.ಮ.ಸಾ.ಸಂಸ್ಥೆಯು ಶಿಕ್ಷಣ ಸಂಸ್ಥೆಯ ನೋಂದಣಿಗೆ ಸಲ್ಲಿಕೆಯಾದ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅನುಮೋದಿಸಲಾಗುವುದು/ತಿರಸ್ಕರಿಸಲಾಗುವುದು. ಅನುಮೋದಿಸಿದ/ತಿರಸ್ಕರಿಸಿದ ಅರ್ಜಿಗಳ ಮಾಹಿತಿಯನ್ನು ವಿವರಗಳೊಂದಿಗೆ ಎಸ್.ಎಂ.ಎಸ್ ಮೂಲಕ ಹಾಗೂ ಶಿಕ್ಷಣ ಸಂಸ್ಥೆಯ ಮತ್ತು ನೋಡಲ್ ಅಧಿಕಾರಿಯ ಇ–ಮೇಲ್ ವಿಳಾಸಕ್ಕೆ ರವಾನಿಸಲಾಗುವುದು.
- ತಿರಸ್ಕೃತವಾದ ಶಿಕ್ಷಣ ಸಂಸ್ಥೆಗಳು ಅವಶ್ಯ ದಾಖಲೆಗಳೊಂದಿಗೆ/ಸ್ಪಷ್ಟೀಕರಣದೊಂದಿಗೆ ಮತ್ತೊಮ್ಮೆ ನೋಂದಣಿ ಅರ್ಜಿಯನ್ನು ಸಲ್ಲಿಸಬಹುದು.

**ಈಗಾಗಲೇ 2019–20 ನೇ ಸಾಲಿನಲ್ಲಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಗಳು ಮಾಹಿತಿಗಳನ್ನು ಅಪ್‌ಡೇಟ್ ಮಾಡಲು ಕೋರಿಕೆ ಸಲ್ಲಿಸುವ ವಿಧಾನ**

ಈಗಾಗಲೇ 2019–20 ನೇ ಸಾಲಿನಲ್ಲಿ ಬೆಂ.ಮ.ಸಾ.ಸಂಸ್ಥೆಯಲ್ಲಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಗಳು ಅಸ್ತಿತ್ವದಲ್ಲಿರುವ ವಿವರಗಳನ್ನು ಬದಲಾವಣೆ ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು ಕೆಳಕಂಡಂತಿವೆ.

- ಶಿಕ್ಷಣ ಸಂಸ್ಥೆಗಳು ಕೋರ್ಸ್‌ಗಳನ್ನು ಸೇರಿಸಬೇಕಾದಲ್ಲಿ/ತೆಗೆದು ಹಾಕಬೇಕಾದಲ್ಲಿ, ನೋಡಲ್ ಅಧಿಕಾರಿಯ ಬದಲಾವಣೆ ಮಾಡಬೇಕಾದಲ್ಲಿ ನಿಗಧಿತ ಅರ್ಜಿಯಲ್ಲಿ ಸಲ್ಲಿಸುವುದು. (ನೋಡಲ್ ಅಧಿಕಾರಿಯ ನಿಗಧಿತ ಅರ್ಜಿಯು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ)
- ಶಿಕ್ಷಣ ಸಂಸ್ಥೆಗಳು ಬದಲಾವಣೆಗಾಗಿ dtostudentpass@mybmtc.com ಇ–ಮೇಲ್ ವಿಳಾಸಕ್ಕೆ ಕೋರಿಕೆ ಸಲ್ಲಿಸುವುದು.
- ನೋಡಲ್ ಅಧಿಕಾರಿಯನ್ನು ಬದಲಾವಣೆ ಮಾಡಬೇಕಾದಲ್ಲಿ, ನೂತನವಾಗಿ ನಾಮನಿರ್ದೇಶನ ಮಾಡಲಾಗುವ ನೋಡಲ್ ಅಧಿಕಾರಿಯ ವಿವರಗಳನ್ನು ನಿಗಧಿತ ಅರ್ಜಿಯಲ್ಲಿ ಇ–ಮೇಲ್ ಮೂಲಕ ಸಲ್ಲಿಸುವುದು. (ನೋಡಲ್ ಅಧಿಕಾರಿಯ ನಿಗಧಿತ ಅರ್ಜಿಯು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ)
- ಹೆಚ್ಚುವರಿಯಾಗಿ ಕೋರ್ಸ್‌ಗಳನ್ನು ಸೇರಿಸಬೇಕಾದಲ್ಲಿ, ಅವಶ್ಯ ದಾಖಲೆಗಳೊಂದಿಗೆ ಇ–ಮೇಲ್ ವಿಳಾಸಕ್ಕೆ ಕೋರಿಕೆ ಸಲ್ಲಿಸುವದು.
- ಕೋರಿಕೆಗಳನ್ನು ಪರಿಶೀಲಿಸಿ ಅನುಮೋದಿಸಿದ/ತಿರಸ್ಕರಿಸಿದ ಮಾಹಿತಿಗಳನ್ನು ಇ–ಮೇಲ್ ಮೂಲಕ ತಿಳಿಸಲಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಬೆಂ.ಮ.ಸಾ.ಸಂಸ್ಥೆಯ ಸಹಾಯವಾಣಿ ಸಂಖ್ಯೆ:080–22483777 ಕರೆ ಮಾಡುವುದು.